

# ಬೀಜಗಳಿಂದ ಕಲಾಕೃತಿ

ತರಕಾರಿ ಹೆಚ್ಚಿದ ಮೇಲೆ ಕಸದ ಬುಟ್ಟಿ ಸೇರುವ ಬೀಜಗಳಿಂದ ಉತ್ತಮ ಕಲಾಕೃತಿ ರಚಿಸಬಹುದು. ಮನೆಯ ಅಲಂಕಾರಕ್ಕೆ, ಸ್ನೇಹಿತರಿಗೆ ಉಡುಗೊರೆಯಾಗಿ ನೀಡಬಲ್ಲಂತಹ ಈ ಬೀಜ ಕಲಾಕೃತಿಗಳು ಶಿರಸಿ ಸಮೀಪದ ಸ್ವರ್ಣವಲ್ಲೀ ಮಠದ ಸುತ್ತಮುತ್ತಲಿನ ಮಹಿಳೆಯರು ತಯಾರಿಸಿದ್ದಾರೆ.

**■ ಚಿತ್ರ ಬರಹ: ಗಣಪತಿ ಹಾಸ್ಪುರ**



ಕಲೆ ಎನ್ನುವುದು ಯಾವ ವಸ್ತುವಿನಿಂದ ಹೇಗೆ ಸುಂದರವಾಗಿ ಅರಳುತ್ತದೆ ಎಂದು ಹೇಳಲಾಗದು. ಇಂದು ನಿರುಪಯುಕ್ತ ವಸ್ತುಗಳಿಂದಲೂ ವೈವಿಧ್ಯಮಯವಾದ ಕಲಾಕೃತಿ ಮಾಡಬಹುದು. ವಿವಿಧ ರೀತಿಯ ಬೀಜಗಳಿಂದ ಆಕರ್ಷಕ ಕಲಾಕೃತಿಗಳನ್ನು ರಚಿಸಬಹುದು, ಇಲ್ಲಿರುವ ಬೀಜದ ಕಲಾಕೃತಿಗಳನ್ನೇ ಸೂಕ್ಷ್ಮವಾಗಿ ಗಮನಿಸಿ. ಸಾಮಾನ್ಯವಾಗಿ ಅವಶ್ಯಕತೆ ಇರುವಷ್ಟು ಬೀಜಗಳು ಪುನಃ ಗಿಡಗಳಾಗಿ ಮರುಬಳಕೆಯಾಗುತ್ತವೆ. ಉಳಿದ ಬೀಜಗಳು ಅಲ್ಲೋ ಇಲ್ಲೋ ಬಿದ್ದು ಹಾಳಾಗುತ್ತವೆ. ಹಾಗೆ ನಿರುಪಯುಕ್ತವೆನಿಸುವ ಬೀಜಗಳಿಂದಲೂ ಉತ್ತಮವಾದ ಕಲಾಕೃತಿಗಳನ್ನು ತಯಾರಿಸಬಹುದು.

ಸೌತೆ ಬೀಜ, ಗೋದಿ, ಗೋವೆ, ಹಾಲುಗುಂಬಳ, ಬತ್ತ, ಮೊಗೆ, ಹೆಸರು ಕಾಳು.... ಹೀಗೆ ಎಲ್ಲಾ ಬಗೆಯ ಬೀಜಗಳಿಂದಲೂ ವಿವಿಧ ಕಲಾಕೃತಿಯನ್ನು ತಯಾರಿಸಬಹುದು. ಆರತಿ ಪ್ಲೇಟಿನಲ್ಲಿ ದೀಪವನ್ನೋ, ಸುರುಳಿ ಸುತ್ತಿದ ಹಾವನ್ನೋ, ಸುಂದರವಾದ ಆರತಿಕಟ್ಟನ್ನೋ, ಆಕರ್ಷಕ ಗಣಪತಿಯನ್ನೋ.... ಹೀಗೆ ಎಲ್ಲ ಬಗೆಯ ಚಿತ್ರಗಳನ್ನು ವಿವಿಧ ಬೀಜಗಳಿಂದಲೇ ರೂಪ ಕೊಡಬಹುದು.

ಈ ವೈವಿಧ್ಯಮಯವಾದ ಬೀಜದ ಕಲಾಕೃತಿಗಳು ಯಾವುದೋ ವೃತ್ತಿನಿರತ ಕಲಾವಿದನ ಕೈಚಳಕದಿಂದ ರೂಪ ಪಡೆದುಕೊಂಡಿಲ್ಲ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿ, ಮನೆ ಕೆಲಸಗಳಲ್ಲಿಯೇ ತೊಡಗಿಕೊಂಡ ಹೆಂಗಳೆಯರೇ ಸಿದ್ಧಪಡಿಸಿದ್ದಾರೆ! ಅದು ಉತ್ತರಕನ್ನಡ ಜಿಲ್ಲೆ ಶಿರಸಿ ಸಮೀಪದ ಸ್ವರ್ಣವಲ್ಲೀ ಮಠದ ವ್ಯಾಪ್ತಿಯಲ್ಲಿ ಬರುವ ವಿವಿಧ ಸೀಮೆಗಳ ಮಾತೆಯರ ಕೈಚಳಕದಿಂದಲೇ ಭಿನ್ನ ಭಿನ್ನ ವಸ್ತುಗಳಾಗಿ ಆಕಾರ ಪಡೆದುಕೊಂಡಿವೆ. ಕಣ್ಮನ ಸೆಳೆಯುವ ಈ ಬೀಜದ ಕಲಾಕೃತಿಗಳು ಎಲ್ಲರಿಗೂ ಖುಷಿ ನೀಡುತ್ತದೆ.

ಪ್ರತಿ ಕೃಷಿಕನ ಮನೆಗಳಲ್ಲಿ ಅನೇಕ ವಿವಿಧ ತಳಿಯ ಕೆಲವು ಬೀಜಗಳು ಮರುಬಳಕೆ ಆಗುತ್ತದೆ. ಮತ್ತಷ್ಟು ಬೀಜಗಳು ಯಾವುದಕ್ಕೂ ಉಪಯೋಗವಾಗದೇ ಹಾಗೆಯೇ ಉಳಿದು ಕೊಂಡಿರುತ್ತದೆ. ಅವು ಗೆದ್ದಲು ಹಿಡಿದು ಹಾಳು ಆಗುವುದಕ್ಕಿಂತ ಅಂತಹ ಬೀಜಗಳಿಂದ ಆಕರ್ಷಕ ಕಲಾಕೃತಿಗಳನ್ನು ಸಿದ್ದ ಮಾಡಿದರೆ ಮನೆಯ ಅಲಂಕಾರಕ್ಕೂ ಬಳಸಬಹುದು. ಸ್ನೇಹಿತರಿಗೆ ಉಡುಗೊರೆಯಾಗಿಯೂ ನೀಡಬಹುದು.

■